**ಪ್ರಾಸಾ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 07-03-2026**

**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

19. ನಂತರ ತನಿಖಾಧಿಕಾರಿಯವರು ಪರಿಚಯಮಾಡಿಕೊಂಡು ತನಿಖಾ ಸಾಮಗ್ರಿಗಳನ್ನು ಕಛೇರಿಗೆ ತರಿಸಿ ಎಲ್ಲರನ್ನು ಒಂದು ಕಡೆ ಕೂರಿಸಿ ನಮ್ಮನ್ನು ಪ್ರತ್ಯೇಕ ಕೂರಿಸಿರುತ್ತಾರೆ. ಆನಂತರ ಪಂಚನಾಮೆ ಮಾಡಿರುತ್ತಾರೆ. ನನ್ನ ಜೊತೆ ಸಂತೊಷ ಕುಮಾರ ಮತ್ತು ಹನುಮಂತರಾಯ ಬಂದಿದ್ದರು. ಪಂಚನಮೆಯ ನಂತರ ನನ್ನ ಸಹಿ ಪಡೆದಿರುತ್ತಾರೆ ನನ್ನ ಸಮಕ್ಷಮ ಏನೂ ಮಾಡಿಲ್ಲ. ಪಂಚನಾಮೆಯನ್ನು ಮಃ 12-30 ರಿಂದ 3-30 ರ ವರೆಗೆ ಮಾಡಿರುತ್ತಾರೆ. ಸಾಕ್ಷಿಗೆ ಕಡತದಲ್ಲಿನ ಹಣ ಜಪ್ತಿ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.25 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 9 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿಪಿ 26 ರಿಂದ 34 ಎಂದು ಭಾಚಿತ್ರಗಳಲ್ಲಿನ ಸಹಿಯನ್ನು ನಿಪಿ 27(ಎ) ರಿಂದ 34(ಎ) ಎಂದು ಗುರುತಿಸಲಾಯಿತು.

20. ನಂತರ ನನ್ನ ಸಮಕ್ಷಮ ಯಾವುದೇ ಕ್ರಮ ವಹಿಸಿರುವುದಿಲ್ಲ. ನನ್ನ ಸಮಕ್ಷಮ ಬೇರೆ ಯಾವುದೇ ಪಂಚನಾಮೆ ಮಾಡಿಲ್ಲ. ಸಾಕ್ಷಿಗೆ ಕಡತದಲ್ಲಿನ ಮಾದರಿ ಧ್ವನಿ ಸಂಗ್ರಹ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.35 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.35(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 8 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅವುಗಳನ್ನು ನಿಪಿ 36 ರಿಂದ 43 ಎಂದು ಸಹಿಗಳನ್ನು ನಿಪಿ 36(ಎ) ರಿಂದ 39(ಎ) ಎಂದು ಗುರುತಿಸಲಾಯಿತು.

21. ನನ್ನ ಸಮಕ್ಷಮ ತನಿಖಾಧಿಕಾರಿಗಳು ಯಾವುದೆ ಬರವಣಿಗೆ ಮಾಡಿಲ್ಲ. ಸಾಕ್ಷಿಗೆ ಕಡತದಲ್ಲಿನ ಧ್ವನಿ ಬರವಣಿಗೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.44 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.44(ಎ) ಎಂದು ಗುರುತಿಸಲಾಯಿತು. ನಾನು ಪೊಲಿಸರಿಗೆ ಈ ಪ್ರಕರಣದಲ್ಲಿ ಯಾವುದೇ ಹೇಳಿಕೆ ನೀಡಿಲ್ಲ.

22. ನನ್ನ ಸಮಕ್ಷಮ ಯಾವುದೇ ಗುನ್ಹಾ ಸ್ಥಳದ ನಕಾಶೆ ತಯಾರಿಸಿಲ್ಲ. ಸಾಕ್ಷಿಗೆ ಕಡತದಲ್ಲಿನ ಗುನ್ಹಾ ಸ್ಥಳ ನಕಾಶೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.45 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.45(ಎ) ಎಂದು ಗುರುತಿಸಲಾಯಿತು.

23. ನಾನು ಲೊಕಾಯುಕ್ತ ಪೊಲಿಸರಿಂದ ಈ ಪ್ರಕರಣದಲ್ಲಿ ಬದಲಿ ಹಣ ಪಾವತಿ ರಸಿದಿ ನೀಡಿಲ್ಲ. ಸಾಕ್ಷಿಗೆ ಕಡತದಲ್ಲಿನ ಬದಲಿ ಹಣ ಪಾವತಿ ರಸಿದಿ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.46 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.46(ಎ) ಎಂದು ಗುರುತಿಸಲಾಯಿತು.

24. ಆರ್ಟಿಕಲ್ 5 ಒಂದು ಬಾಟಲಿನಲ್ಲಿ ಹಾಕಲಾದ ಸೊಡಿಯಂ ಕಾರ್ಬೊನೆಟ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು ಸೊಡಿಯಂ ಕಾರ್ಬೊನೆಟ ದ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-6 ಎಂದು ಗುರುತಿಸಲಾಯಿತು.

25. ಆರ್ಟಿಕಲ್ 6 ಮತ್ತು 6(ಎ) ಎರಡು ಬಾಟಲಿನಲ್ಲಿ ಹಾಕಲಾದ ಬಲಗೈ ಫಿನಾಪ್ತಲಿನ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು ಫಿನಾಪ್ತಲಿನ ದ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-7 ಮತ್ತು 8 ಎಂದು ಗುರುತಿಸಲಾಯಿತು.

26. ಆರ್ಟಿಕಲ್ 7 ಮತ್ತು 7(ಎ) ಎರಡು ಬಾಟಲಿನಲ್ಲಿ ಹಾಕಲಾದ ಎಡಗೈ ಫಿನಾಪ್ತಲಿನ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು ಫಿನಾಪ್ತಲಿನ ದ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-9 ಮತ್ತು 10 ಎಂದು ಗುರುತಿಸಲಾಯಿತು.

27. ಆರ್ಟಿಕಲ್ 9 ಮತ್ತು 9(ಎ) ಎರಡು ಬಾಟಲಿನಲ್ಲಿ ಹಾಕಲಾದ ಪ್ಯಾಂಟಿನ ಹಿಂದಿನ ಜೆಬಿನ ಫಿನಾಪ್ತಲಿನ ದ್ರಾವಣ ಬಿಳಿಯ ಬಟ್ಟೆಯಿಂದ ಪ್ಯಾಕ್ ಮಾಡಿ ಸಿಲ್ ಮಾಡಲಾಗಿದ್ದು ಅದನ್ನು ನ್ಯಾಯಲಯದ ಅನುಮತಿಯ ಮೆರೆಗೆ ಸಾಕ್ಷಿಗೆ ತೊರಿಸಿದ್ದು, ಅದನ್ನು ಫಿನಾಪ್ತಲಿನ ದ್ರಾವಣ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಅದನ್ನು ಮು.ಮಾ-11 ಮತ್ತು 12 ಎಂದು ಗುರುತಿಸಲಾಯಿತು.

28. ಆರ್ಟಿಕಲ್ 10 ಒಂದು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೊಟೆಯನ್ನು ನ್ಯಾಯಲಯದ ಅನುಮತಿಯ ಮೆರೆಗೆ ತೆರೆದು ಸಾಕ್ಷಿಗೆ ತೊರಿಸಿದ್ದು, ಅದರಲ್ಲಿ ಕಪ್ಪು ಬಣ್ಣದ ಪ್ಯಾಂಟ ಸಾಕ್ಷಿ ನೋಡಿ

ಆರೋಪಿಯದ್ದು ಎಂದು ಗುರುತಿಸಿದ್ದು, ಅದನ್ನು ಮು.ಮಾ-13 ಎಂದು ಗುರುತಿಸಲಾಯಿತು. ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ.

29. ಆರ್ಟಿಕಲ್ 11 ಮತ್ತು 11(ಎ) ಎರಡು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೋಟೆಯನ್ನು ನ್ಯಾಯಲಯದ ಅನುಮತಿಯ ಮೇರೆಗೆ ತೆರೆದು ಸಾಕ್ಷಿಗೆ ತೋರಿಸಿದ್ದು, ಅದರಲ್ಲಿ ಎರಡು ಸಿಡಿಗಳನ್ನು ಸಾಕ್ಷಿ ನೋಡಿ ನನ್ನ ಮೊಬೈಲನಲ್ಲಿದ್ದ ಧ್ವನಿಯನ್ನು ಗಣಕಯಂತ್ರದ ಮೂಲಕ ಸಿಡಿಗಳಿಗೆ ವರ್ಗಾವಣೆ ಮಾಡಿರುವುದು ಇರುತ್ತವೆ ಎಂದು ಗುರುತಿಸಿದ್ದು, ಅವುಗಳನ್ನು ಮು.ಮಾ-14 ಮತ್ತು 15 ಎಂದು ಗುರುತಿಸಲಾಯಿತು. ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ.ಮುಮಾ 14 ಸಿಡಿಯನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದ ಮೂಲಕ ಪ್ಲೆ ಮಾಡಲಾಗಿ ಅದು ತೆರೆಯದ ಕಾರಣ ಮತ್ತೊಂದು ಮುಮಾ 15 ಸಿಡಿಯನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದ ಮೂಲಕ ಪ್ಲೆ ಮಾಡಿ ಸಾಕ್ಷಿಗೆ ಕೇಳಿಸಿದ್ದು ಸಾಕ್ಷಿ ಸದರಿ ಸಿಡಿಯಲ್ಲಿನ ಧ್ವನಿ ಆರೋಪಿ ಮತ್ತು ನಾನು ಶಿವರೆಡ್ಡಿ ಕಡತಕ್ಕೆ ಸಂಭಂದಿಸಿದ ಸಂಭಾಷಣೆ ಮಾಡಿರುವುದು ಇರುತ್ತದೆ ಎಂದು ಗುರುತಿಸುತ್ತಾರೆ.

30. ಆರ್ಟಿಕಲ್ 12 ಒಂದು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೋಟೆಯನ್ನು ನ್ಯಾಯಲಯದ ಅನುಮತಿಯ ಮೇರೆಗೆ ತೆರೆದು ಸಾಕ್ಷಿಗೆ ತೋರಿಸಿದ್ದು, ಅದರಲ್ಲಿ ಒಂದು ಮೆಮೊರಿಕಾರ್ಡ ಇದ್ದು ಸಾಕ್ಷಿ ನೋಡಿ ಧ್ವನಿ ಸಂಗ್ರಹ ಮಾಡಿದ ಮೆಮೊರಿಕಾರ್ಡ ಎಂದು ಗುರುತಿಸಿದ್ದು, ಅದನ್ನು ಮು.ಮಾ-16 ಎಂದು ಗುರುತಿಸಲಾಯಿತು. ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಮುಮಾ 16 ಮೆಮೊರಿಕಾರ್ಡನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದ ಮೂಲಕ ಪ್ಲೆ ಮಾಡಿ ಸಾಕ್ಷಿಗೆ ಕೇಳಿಸಿದ್ದು ಸಾಕ್ಷಿ ಸದರಿ ಮೆಮೊರಿಕಾರ್ಡನಲ್ಲಿನ ಧ್ವನಿ ಆರೋಪಿ ಮತ್ತು ನಾನು ಶಿವರೆಡ್ಡಿ ಕಡತಕ್ಕೆ ಸಂಭಂದಿಸಿದ ಸಂಭಾಷಣೆ ಮಾಡಿರುವುದು ಇರುತ್ತದೆ ಎಂದು ಗುರುತಿಸುತ್ತಾರೆ.

31. ಆರ್ಟಿಕಲ್ 1 ಮತ್ತು 2 ಎರಡು ಪ್ಯಾಕ್ ಮಾಡಿ ಸಿಲ್ ಮಾಡಲಾದ ಲಕೋಟೆಯನ್ನು ನ್ಯಾಯಲಯದ ಅನುಮತಿಯ ಮೇರೆಗೆ ತೆರೆದು ಸಾಕ್ಷಿಗೆ ತೋರಿಸಿದ್ದು, ಅದರಲ್ಲಿ ಎರಡು ಸಿಡಿಗಳನ್ನು ಸಾಕ್ಷಿ ನೋಡಿ ಧ್ವನಿ ಸಂಗ್ರಹ ಮಾಡಿರುವ ಸಿಡಿಗಳು ಇರುತ್ತವೆ ಎಂದು ಗುರುತಿಸಿದ್ದು, ಅವುಗಳನ್ನು ಮು.ಮಾ-17 ಮತ್ತು 18 ಎಂದು ಗುರುತಿಸಲಾಯಿತು. ಅದರ ಮೇಲೆ ಪಂಚರು ಮತ್ತು ಪಿಐ ರವರು ಸಹಿ ಮಾಡಿರುತ್ತಾರೆ. ಮುಮಾ 17 ಮತ್ತು 18 ಸಿಡಿಗಳನ್ನು ತೆರೆದ ನ್ಯಾಯಾಲಯದಲ್ಲಿ ಅಧಿಕೃತ ಗಣಕಯಂತ್ರದ ಮೂಲಕ ಪ್ಲೆ ಮಾಡಿ ಸಾಕ್ಷಿಗೆ ಕೇಳಿಸಿದ್ದು ಸಾಕ್ಷಿ ಸದರಿ ಸಿಡಿಯಲ್ಲಿನ ಧ್ವನಿಯಲ್ಲಿ ಆರೋಪಿ ಮತ್ತು ನಾನು ಶಿವರೆಡ್ಡಿ ಕಡತಕ್ಕೆ ಸಂಭಂದಿಸಿದ ಸಂಭಾಷಣೆ ಮಾಡಿರುವುದನ್ನು ಬರವಣಿಗೆ ಮಾಡಿದ್ದು ಅದನ್ನು ಓದಿ ಹೇಳುತ್ತಿರುವುದು ಇರುತ್ತದೆ ಎಂದು ಗುರುತಿಸಿರುತ್ತಾರೆ.

32. ನಿಪಿ 26 ರಿಂದ 34 ಗಳನ್ನು ಸಾಕ್ಷಿಗೆ ತೋರಿಸಿದ್ದು ಅವುಗಳನ್ನು ಯಾವ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ಕೇಳಿದ್ದು ಕೈ ಬಣ್ಣದ ಪರಿಕ್ಕೆಯ ಸಮಯದಲ್ಲಿ ತೆಗೆಯಲಾಗಿರುತ್ತದೆ ಎಂದು ನುಡಿಯತ್ತಾರೆ. ಸದರಿ ಭಾವಚಿತ್ರಗಳಲ್ಲಿ ಆರೋಪಿಯ ಇರುತ್ತಾರೆಂದು ನುಡಿಯುತ್ತಾರೆ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಭಾಗಶಃ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

33. ಪೊಲಿಸರು ಕಛೇರಿಯ ಒಳಗೆ ಬಂದ ಮೆಲೆ ನನಗೆ ಮತ್ತು ನೆರಳು ಸಾಕ್ಷಿಗೆ ನಡೆದ ಘಟನೆ ಬಗ್ಗೆ ಕೇಳಿದ್ದು ನಾವು ಹೇಳಿರುತ್ತೆವೆ ಎಂದರೆ ಸರಿ. ಆರೋಪಿ ನಾನು ಹಣ ನೀಡಿದ ಮೇಲೆ ಎಣಿಸಿಕೊಂಡು ಪ್ಯಾಂಟಿನ ಜೇಬಿಗೆ ಇಟ್ಟುಕೊಂಡಿರುತ್ತಾರೆಂದು ತನಿಖಾಧಿಕಾರಿಗೆ ಹೇಳಿರುತ್ತೆನೆಂದರೆ ಸರಿಯಲ್ಲ. ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬಳಸಿದ ನೀರಿನ ಬಾಟಲಿಯನ್ನು ಹೊರ ತೆಗೆಯಿಸಿ ಶ್ರೀ ಮರೆಪ್ಪ ಸಿ.ಹೆಚ್.ಸಿ ರವರಿಂದ ನೀರನ್ನು ಎರಡು 6 ಗಾಜಿನ ಬೌಲ ನಲ್ಲಿ ಹಾಕಿಸಿ ಸೋಡಿಯಂ ಕಾರ್ಬೋನೇಟ ದ್ರಾವಣ ತಯಾರಿಸಲು ತಿಳಿಸಿದ ಮೇರೆಗೆ ಅದರಂತೆ, ಮೆರೆಪ್ಪ ಸಿ.ಹೆಚ್.ಸಿ ರವರು ಎರಡು ಪುಡಿಯನ್ನು ಹಾಕಿ ಮಿಶ್ರಣ ಮಾಡಿ ದ್ರಾವಣವನ್ನು ತಯ್ಯಾರಿಸಿರುತ್ತಾರೆಂದರೆ ಸರಿಯಲ್ಲ. ಅದು ಮುಮಾ 6 ರಂತೆ ಇರುತ್ತದೆ ಎಂದರೆ ಗೊತ್ತಿಲ್ಲ. ದ್ರಾವಣವು ಬಣ್ಣ ರಹಿತವಾಗಿದ್ದು ಅದರಲ್ಲಿಯ ಗ್ಲಾಸಿನ್ ಬೌಲನಲ್ಲಿ ನೀರು ಹಾಕಿ ಸೋಡಿಯಂ ಕಾರ್ಬೋನೆಟ್ ಸ್ವಲ್ಪ ಪ್ರಮಾಣದಲ್ಲಿಯ ದ್ರಾವಣವನ್ನು ಸ್ಯಾಂಪಲಗಾಗಿ ಗಾಜಿನ ಬಾಟಲಿನಲ್ಲಿ ಹಾಕಿ ಬಾಯಿ ಮುಚ್ಚಿ ಬಟ್ಟೆ ಸುತ್ತೆ ದಾರದಿಂದ ಕಟ್ಟಿ "SN" ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಮುಮಾ 6 ರಂತೆ ( ಆರ್ಟಿಕಲ್ ನಂಬರ 5 ಅಂತಾ ಗುರ್ತಿಸಿರುತ್ತಾರೆ.) ಇರುತ್ತದೆ ಎಂದರೆ ಸರಿಯಲ್ಲ .

34 ನಂತರ ಉಳಿದ ಸೋಡಿಯಂ ಕಾರ್ಬೋನೆಟ್ ದ್ರಾವಣದ ಒಂದು ಬೌಲ ನಲ್ಲಿ ಆಪಾದಿತ ಮಲ್ಲಿಕಾರ್ಯನ ಇವರ ಬಲಗೈ ಬೆರಳುಗಳನ್ನು ಅದ್ದಿ ತೊಳೆಯಿಸಲಾಗಿ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ, ಸದರಿ ದ್ರಾವಣವನ್ನು ಎರಡು ಸಮಭಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ "SN "ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತಾವು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 6 ಮತ್ತು 6(ಎ) ಎಂದು ಗುರುತಿಸಿ ಅವುಗಳು ಈಗಾಗಲೆ ಮುಮಾ 7 ಮತ್ತು 8 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

35 ನಂತರ ಇನ್ನೊಂದು ಸೋಡಿಯಂ ಕಾರ್ಬೋನೆಟ್ ದ್ರಾವಣವಿರುವ ಬೌಲನಲ್ಲಿ ಮಲ್ಲಿಕಾರ್ಜುನ ಇವರ ಎಡಗೈ ಬೆರಳುಗಳನ್ನು ಅದ್ದಿ ತೊಳೆಯಿಸಿದ್ದು, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ಎರಡು ಸಮವಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ "SN'' ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 7 ಮತ್ತು 7-ಎ ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 9 ಮತ್ತು 10 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

36 ನಂತರ ತನಿಖಾಧಿಕಾರಿಯವರು ಅಪಾದಿತ ಮಲ್ಲಿಕಾರ್ಜುನ ಬಾಬು ಇವರ ಹತ್ತಿರ ಎದ್ದ ತಮ್ಮ ಹಿಂದಿನ ಪ್ಯಾಂಟಿನ ಜೇಬಿನಲ್ಲಿಟ್ಟಿದ್ದ ಲಂಚದ ಹಣವನ್ನು ಹೊರಗಡೆ ತೆಗೆದು ಟೇಬಲ್ ಮೇಲೆ ಇಡಲು ತಿಳಿಸಿದಂತೆ ಅವರು ತೆಗೆದು ಟೇಬಲ್ ಮೇಲೆ ಇಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಅವುಗಳನ್ನು ಪಂಚ ಸಾಕ್ಷಿ ಹಣಮಂತರಾಯ ಇವರು ಇನ್ನೊಬ್ಬ ಪಂಚ ಸಾಕ್ಷಿಯಾದ ಸಂತೋಷಕುಮಾರ ರವರೊಂದಿಗೆ ತಾಳೆ ಮಾಡಿ ಈ ನೋಟುಗಳು ಎ.ಸಿ.ಬಿ ಪೊಲೀಸ ಠಾಣೆಯಲ್ಲಿ ನನಗೆ ವಹಿಸಿಕೊಟ್ಟ ನೋಟುಗಳೇ ಆಗಿರುತ್ತವೆ ಅಂತಾ ಗುರುತಿಸಿ ಸದರಿ ನೋಟುಗಳು ರೂ 500/-ರೂ ಮುಖ ಬೆಲೆಯ 10 ನೋಟುಗಳು, ಹಾಗೂ ರೂ 5,000/- ಆಗಿದ್ದು ಅವುಗಳನ್ನು ಒಂದು ಕಾಗದದ ಕವರಿನಲ್ಲಿ ಹಾಕಿ, ಬಾಯಿ ಅಂಟಿಸಿ 'SN' ಅಂತಾ ಇಂಗ್ಲಿಷಿನಲ್ಲಿ ಮೊಹರು ಮಾಡಿಸಿ, ಒಂದು ಸಣ್ಣ ಹಾಳೆಯಲ್ಲಿ ವಿವರಗಳನ್ನು ಬರೆದು ಅದರಲ್ಲಿ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಅದನ್ನು ಕವರಿಗೆ ಅಂಟಿಸಿ ಆರ್ಟಿಕಲ್ ನಂ-8 ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 1 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

37 ನಂತರ ತನಿಖಾಧಿಕಾರಿಯವರು ಇನ್ನೊಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯ್ಯಾರಿಸಲು ಮರಪ್ಪ ಸಿಹೆಚ್.ಸಿ ರವರಿಗೆ ತಿಳಿಸಿದಂತೆ ಅವರು ತಯ್ಯಾರಿಸಿದ್ದು ಅದರಲ್ಲಿ ಆಪಾದಿತ ಮಲ್ಲಿಕಾರ್ಜುನ ಇವರು, ಲಂಚದ ಹಣ ಇಟ್ಟುಕೊಂಡಿದ್ದ ಪ್ಯಾಂಟಿನ ಹಿಂದಿನ ಜೇಬನ್ನು ಸೋಡಿಯಂ ದ್ರಾವಣದಲ್ಲಿ ಅದ್ದ ಬೇಕಾಗಿದ್ದರಿಂದ ಮತ್ತೊಂದು ಪ್ಯಾಂಟಿನ ಏರ್ಪಾಡು ಮಾಡಿ ಲಂಚದ ಹಣ ಇಟ್ಟುಕೊಂಡಿದ್ದ ಪ್ಯಾಂಟನ್ನು ಬಿಚ್ಚಿಸಿ ಶ್ರೀ ಮರೆಪ್ಪ ಸಿ.ಹೆಚ್.ಸಿ ಸದರಿ ಪ್ಯಾಂಟಿನ ಹಿಂದಿನ ಜೇಬನ್ನು ಅದ್ದಿ ತೊಳೆಯಿಸಿದರು. ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ಗುಲಾಬಿ ಬಣ್ಣದ ದ್ರಾವಣವನ್ನು ಎರಡು ಸಮಭಾಗಗಳಾಗಿ ಮಾಡಿ ಎರಡು ಖಾಲಿ ಗಾಜಿನ ಬಾಟಲಿಗಳಲ್ಲಿ ಸಂಗ್ರಹಿಸಿ ಬಾಯಿ ಮುಚ್ಚಿ ಬಟ್ಟೆ ಸುತ್ತಿ ದಾರದಿಂದ ಕಟ್ಟಿ "SN"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಆರ್ಟಿಕಲ್ ನಂಬರ 9 ಮತ್ತು 9-ಎ ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 11 ಮತ್ತು 12 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

38 ನಂತರ ತನಿಖಾಧಿಕಾರಿಯವರು, ಪಂಚರ ಸಮಕ್ಷಮದಲ್ಲಿ ಆಪಾದಿತನು ಧರಿಸಿದ ಕಪ್ಪು ಬಣ್ಣದ ಪ್ಯಾಂಟನ್ನು, ಕೇಸಿನ ಮುಂದಿನ ಪುರಾವೆಗಾಗಿ ಜಪ್ತಿ ಪಡಿಸಿಕೊಂಡು ಒಂದು ಕಾಗದದ ಕವರಿನಲ್ಲಿ ಹಾಕಿ ಬಾಯಿ ಮುಚ್ಚಿ "SN"' ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಅದಕ್ಕೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿದ ವಿವರಣೆ ಬರೆದ ಚೀಟಿಯನ್ನು ಅಂಟಿಸಿ ಅರ್ಟಿಕಲ್ ನಂಬರ 10 ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 13 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

39 ನಂತರ ನಾನು ಧ್ವನಿ ಮುದ್ರಿಸಿಕೊಂಡಿದ್ದ ಮೊಬೈಲನಲ್ಲಿದ್ದ ಮಮೆರಿ ಕಾರ್ಡಿನಲ್ಲಿ ಆಪಾದಿತ ಮಲ್ಲಿಕಾರ್ಜುನ ಮತ್ತು ನನ್ನ ನಡುವೆ ನಡೆದ ಸಂಭಾಷಣೆಯನ್ನು ಲ್ಯಾಪಟಾಪಿನಲ್ಲಿ ಹಾಕಿ, ಸಂಭಾಷಣೆಯನ್ನು, ಅದೇ ಕಛೇರಿಯಲ್ಲಿದ್ದ ಶ್ರೀ ದತ್ತಾತ್ರೇಯ ತಂದೆ ಬಾಲಾಜಿ ಪಾಟೀಲ ವಯ:40 ವರ್ಷ ಉ:ಸಹಾಯಕ ನಿರ್ದೇಶಕರು, ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ ಜಿಲ್ಲಾ ಪಂಚಾಯತ, ಯಾದಗಿರಿ ಸಾ:ಹಳ್ಳಿ ಗ್ರಾಮ ತಾ:ಬಸವಕಲ್ಯಾಣ ಜಿ:ಬೀದರ ಹಾ.ವ ರಾಮ ನಿವಾಸ್ ವೆಂಕಟೇಶ್ ನಗರ ಕಲಬುರಗಿ, ರವರಿಗೆ ಕೇಳಿಸಿದರು, ಲಂಚದ ಬೇಡಿಕೆ ಇಟ್ಟ ಧ್ವನಿಯು ಮಲ್ಲಿಕಾರ್ಜುನ ತಂದೆ ಮೈಲಾರಪ್ಪ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಯಾದಗಿರಿ ಇವರದೇ ಇರುತ್ತದೆಂದು ಗುರ್ತಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಂತರ ನನ್ನ ಮೋಬೈಲ ಮೆಮರಿ ಕಾರ್ಡನಲ್ಲಿ, ರಿಕಾರ್ಡ ಇದ್ದ ಲಂಚದ ಬೇಡಿಕೆಯ ಸಂಬಾಷಣೆಯನ್ನು, ಲ್ಯಾಪ ಟಾಪ ಮುಖಾಂತರ ಎರಡು ಸಿ.ಡಿ ಗಳಿಗೆ ವರ್ಗಾಯಿಸಿ. ಸಿ.ಡಿ ಗಳನ್ನು ಒಂದೊಂದು ಪ್ರತ್ಯೇಕ ಕಾಗದದ ಕವರಿನಲ್ಲಿ ಹಾಕಿ ಅದಕ್ಕೆ ಬಾಯಿ ಅಂಟಿಸಿ

"SN"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಈ ಬಗ್ಗೆ ವಿವರಣೆ ಬರೆದ ಚೀಟಿ ಮೇಲೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಕ್ರಮವಾಗಿ ಸಿ.ಡಿಯನ್ನು ಆರ್ಟಿಕಲ್ಲ ನಂ: 11 ಮತ್ತು 11-ಎ ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 14 ಮತ್ತು 15 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

40. ನಂತರ ನನ್ನ ಮೋಬೈಲದಲ್ಲಿದ್ದ ಮೆಮೆರಿ ಕಾರ್ಡನ್ನು ಲ್ಯಾಪ ಟಾಪಿಗೆ ಹಚ್ಚಿ ಲಂಚದ ಹಣ ಕೊಡುವಾಗ ರಿಕಾರ್ಡ ಆಗಿರುವ ಸಂಬಾಷಣೆ ಕೇಳಲು ಅದರಲ್ಲಿ, ನಾನು ಹಾಂ ಸರ್ ಫೈಲ್ ಎಲ್ಲಿ ಇಲ್ಲೆ ಅದೇ ಸರ್. ಆಪಾದಿತ: ಹಾಂ? ನಾನು: ಇಲ್ಲಾ ಅದೇ ಮಿಸ್ಸ ಆಯಿತು ಸರ್ ಈಗಾ ಪೇ ಮಾಡ್ತೀನೀ ಸರ್. ಆಪಾದಿತ ಸಂಬಾಷಣೆ ಎಷ್ಟಿದೆ.. ನಾನು: ಐದಿದೆ ಸರ್. ನೀವು ಎಷ್ಟು ಕೇಳದ್ರೀ ಅಷ್ಟೆ ಅಂತಾ ಇತ್ಯಾದಿಯಾಗಿ ದಾಖಲಾಗಿದ್ದು, ಸದರಿ ಸಂಬಾಷಣೆಯನ್ನು ಪ್ರತ್ಯೇಕವಾಗಿ ಕಛೇರಿಯ ಶ್ರೀಮತಿ ಮಲ್ಲಮ್ಮ ಡಬ್ಲ್ಯು .ಪಿಸಿ ರವರಿಗೆ ಬರೆಯಲು ತಿಳಿಸಿದರು ಎಂದರೆ ಗೊತ್ತಿಲ್ಲ. ನಂತರ ತಾವು ಸದರಿ ಮೆಮೊರಿ ಕಾರ್ಡನ್ನು ಕೇಸಿನ ಮುಂದಿನ ತನಿಖೆಗಾಗಿ ಒಂದು ಕಾಗದದ ಕವರಿನಲ್ಲಿ ಹಾಕಿ ಅದಕ್ಕೆ ಬಾಯಿ ಅಂಟಿಸಿ "SN"ಎಂಬ ಇಂಗ್ಲಿಷ್ ಅಕ್ಷರದ ಮುದ್ರೆಯಿಂದ ಮೊಹರು ಮಾಡಿಸಿ ಈ ಬಗ್ಗೆ ವಿವರಣೆ ಬರೆದ ಚೀಟಿ ಮೇಲೆ ಪಂಚರು ಮತ್ತು ತನಿಖಾಧಿಕಾರಿಯವರು ಸಹಿ ಮಾಡಿ ಆರ್ಟಿಕಲ್ ನಂಬರ-12 ಅಂತಾ ಗುರ್ತಿಸಿ ಅವುಗಳು ಈಗಾಗಲೆ ಮುಮಾ 16 ಎಂದು ಗುರತಿಸಲ್ಪಟ್ಟಿರುತ್ತವೆ ಎಂದರೆ ಗೊತ್ತಿಲ್ಲ.

41. ನಂತರ ನನಗೆ ಸಂಬಂದಿಸಿದ ಕಡತದ ಬಗ್ಗೆ ಪರಿಶೀಲನೆ ಮಾಡಲಾಗಿ, 1] ಡಿ.ಸಿ.ಬಿಲ್ ಪುಟ 1 ರಿಂದ 3 ಪುಟಗಳ ಇದರ ಮೇಲೆ ಆಪಾದಿತನ ಕೌಂಟರ ಸಹಿ ಆಗಬೇಕಾಗಿತ್ತು, 2] ಟ್ಯಾಕ್ಸ ಇನವೈಸ್ ಬಿಲ್ಲ ಪುಟ ಮತ್ತು 5 ಇದರ ಮೇಲೆಯೂ ಆಪಾದಿತನ ಕೌಂಟರ ಸಹಿ ಆಗಬೇಕಾಗಿತ್ತು ಎಂದರೆ ಗೊತ್ತಿಲ್ಲ. ಇದಕ್ಕೆ ಸಂಬಂದಿಸಿದಂತೆ ಇವುಗಳಲ್ಲಿ ಒಟ್ಟು 1 ರಿಂದ 9 ಪುಟಗಳು ಡಿ.ಸಿ ಬಿಲ್ಲ ಮತ್ತು ಟ್ಯಾಕ್ಸ ಇನ್ ವೈಸ್ ಬಿಲ್ಲ ಮೇಲೆ ಆಪಾದಿತರ ಕೌಂಟರ ಸಹ ಮಾಡಿಸಿಕೊಂಡು, ಝರಾಕ್ಸ್ ಮಾಡಿಸಿಕೊಂಡು ದತ್ತಾತ್ರೇಯ ಪಾಟೀಲ, ಸಹಾಯಕ ತೋಟಗಾರಿಕೆ ನಿರ್ದೇಶಕರು ಇವರ ದೃಡೀಕೃತ ಪಡೆದುಕೊಂಡು ತನಿಖಾಧಿಕಾರಿಯವರು ತಮ್ಮ ತಾಬೆಗೆ ತೆಗೆದುಕೊಂಡಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ಆಗ ಆಪಾದಿತ ಮಲ್ಲಿಕಾರ್ಜುನ ಬಾಬು ಇವರಿಗೆ ತಮ್ಮ ಸಂರಕ್ಷಣಾತ್ಮಕ ಪತ್ರ ಬರೆದುಕೊಡಲ ತಿಳಿಸಿದಂತೆ ಮಲ್ಲಿಕಾರ್ಜುನ ಬಾಬು ಇವರ ಬಲಗೈ ಹೆಬ್ಬರಳಿಗೆ ಪೆಟ್ಟಾಗಿದ್ದರಿಂದ ಅವರ ಕಛೇರಿ ಸಿಬ್ಬಂದಿ ಶ್ರ ಪ್ರಕಾಶ ತಂದೆ ಮನೋಹರ ಸಾ:ಓಂ ನಗರ ಕಲಬುರಗಿ ಇವರ ಸಹಾಯದಿಂದ ಗಣಕಯಂತ್ರದಲ್ಲಿ ಟೈ ಮಾಡಿಸಿಕೊಟ್ಟಿದ್ದು, ಮಲ್ಲಿಕಾರ್ಜುನ ಬಾಬು ಇವರು ಸಂರಕ್ಷಣಾತ್ಮಕ ಪತ್ರದಲ್ಲಿ, 11:00 ಗಂಟೆಯ ಸುಮಾರಿ' ಕೆಲಸದಲ್ಲಿ ವ್ಯಸ್ತವಾಗಿದ್ದಾಗ ವಿರುಪಾಕ್ಷ ಗೌಡ ಇವರು ಬಂದು ಕೆಲಸದಲ್ಲಿ ಮಗ್ನನಾಗಿದ್ದ ನನ್ನ ಕೈಯಲ್ಲಿ ಎನ್ನೂ ತುರುಕಿ ಜೇಬಿನಲ್ಲಿಟ್ಟುಕೊಳ್ಳಿ, ಎಂದರು ಎನು ನನಗೆ ಕೊಟ್ಟಿದ್ದಾರೆ ಎಂದು ತಿಳಿದಿರುವುದಿಲ್ಲ ಎಂದರೆ ಗೊತ್ತಿಲ್ಲ.

ಇದರಲ್ಲಿ ನಾನ ಯಾವುದೆ ರೀತಿ ದೋಷ ಪೂರಿತವಾಗಿ ನಡೆದುಕೊಂಡಿರುವದಿಲ್ಲ ಎಂದು ಬರೆದುಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಬಗ್ಗೆ ನನಗೆ ಮತ್ತು ನೆರಳು ಸಾಕ್ಷಿ ಸಂತೋಷಕುಮಾರನಿಗೆ ಗೆ ವಿಚಾರಿಸಲು, ನಾವು ಅದನ್ನು ಕಲ್ಲಗಳೆದು ಸದರಿಯವರು 12:15 ಗಂಟೆಗೆ ತನ್ನ ಚಿಂಬರಿನಲ್ಲಿ ಅಂದಿದ ಈ5,000/-ರೂ ಸಬ್ಸಿಡಿ ಹಣ ಮಂಜೂರಿ ಮಾಡಲು ಲಂಚದ ಬೇಡಿಕೆ ಇಟ್ಟು ಸತಾಯಿಸಿ ನನ್ನಿಂದ ಲಂಚದ ಹಣ ಕೇಳಿ ತನ್ನ ಬಲಗೈಯಿಂದ ತೆಗೆದುಕೊಂಡು ಎಣಿ ತನ್ನ ಪ್ಯಾಂಟಿನ ಹಿಂದಿನ ಜೇಬಿನಲ್ಲಿಟ್ಟುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅವರು ಟೈಪ ಮಾಡಿಸಿ ಕೊಟ್ಟ ಲಿಖಿತ ಹೇಳಿಕೆ ಸುಳ್ಳಿರುತ್ತದೆಂದು ತಿಳಿಸಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ನಂತರ ತನಿಖೆಯಲ್ಲಿ ಉಪಯೋಗಿಸಿದ "SN" ಎಂಬ ಇಂಗ್ಲಿಷ್ ಅಕ್ಷರದ ಸೀಲನ್ನು ಪಂಚ ಸಾಕ್ಷಿ ಹಣಮಂತರಾಯ ಇವರಿಗೆ ನೀಡಿ ತನಿಖಾಧಿಕಾರಿಯಾಗಲೀ ಮಾನ್ಯ ನ್ಯಾಯಾದೀಶರಾಗಲಿ ಹಾಜರ ಪಡಿಸಲು ತಿಳಿಸಿದಾಗ ಹಾಜರು ಪಡಿಸುವಂತೆ ಸೂಕ್ತ ತಿಳುವಳಿಕೆ ಕೊಟ್ಟು ರಸೀದಿ ಪಡೆದುಕೊಂಡರು ಎಂದರೆ ಗೊತ್ತಿಲ್ಲ. ಈ ಹಣ ಜಪ್ತಿ ಪಂಚನಾಮೆ ಕಾಲಕ್ಕೆ ನಡೆದ ಘಟನಾವಳಿಗಳನ್ನು ಗುತ್ತಪ್ಪಗೌಡ ಸಿಪಿಸಿ ರವರು ಫೋಟೋಗ್ರಾಫಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

42. ನಂತರ ಪಂಚರಿಗೆ ಪುನಃ ಪ್ರಕರಣದ ಫಿರ್ಯಾದಿಯಾದ ನನ್ನ ಮತ್ತು ಆಪಾದಿತ ಮಲ್ಲಿಕಾರ್ಜುನ ಬಾಬು ತೋಟಗಾರಿಕೆಯ ಉಪ ನಿರ್ದೇಶಕರು, ಯಾದಗಿರಿ ರವರ ಮಾದರಿ ಧ್ವನಿ ಸಂಗ್ರಹ ಪಂಚನಾಮೆ ಮಾಡಲು ಕೋರಿಕೊಂಡಂತೆ. ಪಂಚರು ಒಪ್ಪಿಕೊಂಡು ಸಹಕರಿಸುವದಾಗಿ ತಿಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಅದರಂತೆ ಮಾದರಿ ಧ್ವನಿ ಸಂಗ್ರಹಣೆ ಕುರಿತು ತನಿಖಾಧಿಕಾರಿಯವರು ಪಂಚರಿಗೆ ತಿಳುವಳಿಕೆ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

43. ನಂತರ ಈ ಮೊದಲೆ ತಿಳಿಸಿದಂತೆ ತಾವು ಸೋನಿ ವೈಸ್ ರಿಕಾರ್ಡ ಆನ್ ಮಾಡಿ, ತಮ್ಮ ಹೆಸರು ನಾನು ಗುರುಪಾದ ಸಿದ್ದನಗೌಡ ಬಿರಾದಾರ ಪೊಲೀಸ್ ಇನ್ಸಪೆಕ್ಟರ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ತಂದೆ ಶಿವರೆಡ್ಡಿ ಪಾಟೀಲ ವಯ:28 ಉ:ಎಸ್.ಡಿ.ಎ ತಾಲೂಕಾ ಹಿಂದುಳಿದ ವರ್ಗಗಳ ವಿಸ್ತೀರ್ಣಾದಿಕಾರಿಗಳ ಕಛೇರಿ, ಯಾದಗಿರಿ ಸಾ:ಎಂ. ಹೊಸಳ್ಳಿ ತಾ:ಜಿ:ಯಾದಗಿರಿ ಇವರಿಗೆ ಕಛೇರಿಯ ಸೋನಿ ಕಂಪನಿಯ ವೈಸ್ ರಿಕಾರ್ಡರನ್ನು ಮುಂದಿನ ರಿಕಾರ್ಡ ಮಾಡುವ ಕುರಿತು ಕೊಟ್ಟಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ಆಗ ಮೊದಲನೇ ಪಂಚರು ನಾನು ಸಂತೋಷಕುಮಾರ ತಂದೆ ಶಿವರೆಡ್ಡಿ, ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಅಂತಾ ಹೇಳಿ ಇನ್ನೊಬ್ಬ ಪಂಚ ಸಾಕ್ಷಿ, ಶ್ರೀ ಹಣಮಂತರಾಯ ತಂದೆ ರಮೇಶ ಸುತಾರ ವಯ: 31 ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ, ಸಾ:ನರೋಣಾ ತಾ:ಆಳಂದ ಜಿ:ಕಲಬುರಗಿ, ಇವರ ಮುಂದೆ ವೈಸ ರಿಕಾರ್ಡ ಇಟ್ಟು

ಅವರು ನಾನು ಹಣಮಂತರಾಯ ತಂದೆ ರಮೇಶ ಸುತಾರ ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ ಅಂತಾ ತಿಳಿಸಿದರು ಎಂದರೆ ಗೊತ್ತಿಲ್ಲ. ನಂತರ ಹಣಮಂತರಾಯ ಇವರು ಸೋನಿ ವೈಸ್ ರಿಕಾರ್ಡರನ್ನು ನನ್ನ ಮುಂದೆ ಧ್ವನಿ ಮುದ್ರಣ ಮಾಡಿಕೊಳ್ಳಲು ಇಟ್ಟರು ಎಂದರೆ ಗೊತ್ತಿಲ್ಲ. ಆಗ ನಾನು ನನ್ನ ಹೆಸರು ವಿರುಪಾಕ್ಷ ತಂದೆ ಶಿವರಾಜಪ್ಪ ಪೊಲೀಸ್ ಪಾಟೀಲ ಅಂತಾ ತಿಳಿಸಿ ಸ್ಕ್ರೀಪ್ಟ-1 ನ್ನೆದ್ದರ ಈ ಮೊದಲೆ ತಿಳಿಸಿದಂತೆ ಮಾಧರಿ ಧ್ವನಿ ಸಂಗ್ರಹಣಕ್ಕಾಗಿ 3 ಬಾರಿ ಓದಿರುತ್ತೇನೆ ಎಂದರೆ ಗೊತ್ತಿಲ್ಲ.

44. ನಂತರ ಸೋನಿ ವಾಯ್ಸ್ ರಿಕಾರ್ಡ್ರನಲ್ಲಿ ಧ್ವನಿ ಮುದ್ರಿಸಿದ ಸದರಿ ಧ್ವನಿ ಮುದ್ರಣಗಳನ್ನು ತಮ್ಮ ಠಾಣೆಯ ಸಿಬ್ಬಂದಿ ವಿಜಯಕುಮಾರ ಸಿಹೆಚ್‌ಸಿ ರವರ ಸಹಾಯದಿಂದ ಲ್ಯಾಪ ಟ್ಯಾಪಗೆ ಅಳವಡಿಸಿ ಡೌನಲೋಡ ಮಾಡಿಕೊಂಡು ಪರಿಶೀಲಿಸಲು, ಸದರಿ ಸ್ಕ್ರೀಪ್ಟ-1 ನ್ನೆದ್ದರ ಫಿರ್ಯಾದಿ ವಿರುಪಾಕ್ಷ ಇವರ ಮಾದರಿ ಧ್ವನಿ ಸಂಭಾಷಣೆ ಫೈಲ್ ನಂ:200930-042 ನ್ನೆದ್ದರಲ್ಲಿ ಸೇವ್ ಆಗಿದ್ದು, ಈ ಸ್ಕೀಪ್ಪನ್ನು ಒಂದು ಹೊಸ ಸಿ.ಡಿ. ಯಲ್ಲಿ ವರ್ಗಾಯಿಸಿದ್ದು ನಂತರ ಸದರಿ ಸಿ.ಡಿಯನ್ನು, ಪಂಚ ಸಾಕ್ಷಿದಾರರ ಸಮಕ್ಷಮ ಕೇಳಿಸಲು, ಅದು ಪಂಚರು ಪ್ರಾರಂಬಿಸಿದ ವೈಸ ರಿಕಾರ್ಡದಲ್ಲಿ ದಾಖಲಾಗಿದ್ದ ಸಂಭಾಷಣೆ ಇದ್ದು ಫಿರ್ಯಾದಿಗಾಗಿ ತಯ್ಯಾರಿಸಿದ ಸ್ಕ್ರೀಪ್ಟ-1 ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಂತರ ತನಿಖಾಧಿಕಾರಿಯವರು ಸದರಿ ಸಿ.ಡಿಯ ಮೇಲೆ ತಮ್ಮ ಮತ್ತು ಪಂಚರ ಸಹಿ ಮಾಡಿಸಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ನಂತರ ಸದರಿ ಸಿ.ಡಿಯನ್ನು ಒಂದು ಕಾಗದದ ಕವರಿನಲ್ಲಿ ಹಾಕಿ ಅಂಟಿಸಿ, "SN" ಇಂಗ್ಲೀಷ್ ಅಕ್ಷರದ ಅರಗಿನಿಂದ ಸೀಲ ಮಾಡಲಾಯಿತು. ಹಾಗೂ ಸದರಿ ಸಿ.ಡಿ.ಕವರಿಗೆ ಅ.ನಂ 1] ಮಾದರಿ ಧ್ವನಿ ಸಂಗ್ರಹಣೆ ಆರ್ಟಿಕಲ್ ನಂ:1 ಎಂದು ಗುರುತಿಸಿ, ವಿವರ ಬರೆದ ಹಾಳೆಯ ಮೇಲೆ ತನಿಖಾಧಿಕಾರಿಯವರು ಮತ್ತು ಪಂಚ ಸಾಕ್ಷಿದಾರರ ಸಹಿ ಪಡೆದು ಸದರಿ ಚೀಟಿಯನ್ನು ಕವರಿಗೆ ಅಂಟಿಸಿ. ಮುಂದಿನ ತನಿಖೆ ಕುರಿತು ತನಿಖಾಧಿಕಾರಿಯವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ.

45. ನಂತರ ಈ ಮೊದಲೆ ತಿಳಿಸಿದಂತೆ ತಾವು ಸೋನಿ ವೈಸ್ ರಿಕಾರ್ಡ ಆನ್ ಮಾಡಿ, ತಮ್ಮ ಹೆಸರು ನಾನು ಗುರುಪಾದ ಸಿದ್ದನಗೌಡ ಬಿರಾದಾರ ಪೊಲೀಸ್ ಇನ್ಸಪೆಕ್ಟರ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ ಶ್ರೀ ಸಂತೋಷಕುಮಾರ ತಂದೆ ಶಿವರೆಡ್ಡಿ ಪಾಟೀಲ ವಯ:28 ಉಎಸ್.ಡಿ.ಎ ತಾಲೂಕಾ ಹಿಂದುಳಿದ ವರ್ಗಗಳ ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಸಾ:ಎಂ. ಹೊಸಳ್ಳಿ ತಾ:ಜಿ:ಯಾದಗಿರಿ ಇವರಿಗೆ ಕಛೇರಿಯ ಸೋನಿ ಕಂಪನಿಯ ವೈಸ್ ರಿಕಾರ್ಡರನ್ನು ಮುಂದಿನ ರಿಕಾರ್ಡ ಮಾಡುವ ಕುರಿತು ಕೊಟ್ಟಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ಆಗ ಮೊದಲನೇ ಪಂಚರು ನಾನು ಸಂತೋಷಕುಮಾರ ತಂದೆ ಶಿವರೆಡ್ಡಿ ಹಿಂದುಳಿದ ವರ್ಗಗಳ

ವಿಸ್ತೀರ್ಣಾಧಿಕಾರಿಗಳ ಕಛೇರಿ, ಯಾದಗಿರಿ ಅಂತಾ ಹೇಳಿ ಇನ್ನೊಬ್ಬ ಪಂಚ ಸಾಕ್ಷಿ. ಶ್ರೀ ಹಣಮಂತರಾಯ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ. ಸಾ:ನರೋಣಾ ತಾ:ಆಳಂದ ಜಿಕಲಬುರಗಿ, ಇವರ ಮುಂದೆ ವೈಸ ರಿಕಾರ್ಡ ಇಟ್ಟಿದ್ದು ಎಂದರೆ ಗೊತ್ತಿಲ್ಲ. ಅವರು ನಾನು ಹಣಮಂತರಾಯ ತಂದೆ ರಮೇಶ ಸುತಾರ ಉ: ಎಸ್.ಡಿ.ಎ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿ, ಮಿನಿ ವಿಧಾನ ಸೌದ ಯಾದಗಿರಿ ಅಂತಾ ತಿಳಿಸಿ ಪಂಚ ಸಾಕ್ಷಿ, ಹಣಮಂತರಾಯ ಇವರು ಸೋನಿ ವೈಸ್ ರಿಕಾರ್ಡರನ್ನು ಪ್ರಕರಣದ ಆಪಾದಿತನಾದ ಮಲ್ಲಿಕಾರ್ಜುನ ಬಾಬು ತಂದೆ ಮೈಲಾರಪ್ಪ ವಯ:43 ಉ: ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ ಯಾದಗಿರಿ ಗ್ರೇಡ್-ಎ ಜಾತಿ:ಎಸ್.ಸಿ(ಮಾದಿಗ) ಸಾ:ಬೂದಿಬೆಟ್ಟ ಗ್ರಾಮ ತಾ:ಪಾವಗಡ ಜಿ:ತುಮಕೂರು ಹಾ.ವ ಶ್ರೀನಾಥ ಜೈನ ಇವರ ಮನೆಯಲ್ಲಿ ಬಾಡಿಗೆ ಆರ್.ವಿ. ಶಾಲೆ ಹತ್ತಿರ ಲಕ್ಷ್ಮಿ ನಗರ ಯಾದಗಿರಿ ರವರ ಮುಂದೆ ದ್ವನಿ ಮುದ್ರಣ ಮಾಡಿಕೊಳ್ಳಲು ಇಟ್ಟಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ಆಗ ಆಪಾದಿತ ತನ್ನ ಹೆಸರು ನಾನು ಮಲ್ಲಿಕಾರ್ಜುನ ಬಾಬು ತಂದೆ ಮೈಲಾರಪ್ಪ ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಅಂತಾ ತಿಳಿಸಿ ಸ್ಕ್ರೀಪ್ಟ-2 ನ್ನೆದ್ದರಂತೆ ಈ ಮೊದಲೆ ತಿಳಿಸಿದಂತೆ ಮಾಧರಿ ದ್ವನಿ ಸಂಗ್ರಹಣಕ್ಕಾಗಿ 3 ಬಾರಿ ಓದಿರುತ್ತಾರೆ ಎಂದರೆ ಗೊತ್ತಿಲ್ಲ.

46. ನಂತರ ಸೋನಿ ವಾಯ್ಸ್ ರಿಕಾರ್ರ್ಡನಲ್ಲಿ ಧ್ವನಿ ಮುದ್ರಿಸಿದ ಸದರಿ ಧ್ವನಿ ಮುದ್ರಣಗಳನ್ನು ತಮ್ಮ ಠಾಣೆಯ ಸಿಬ್ಬಂದಿ ವಿಜಯಕುಮಾರ ಸಿಹೆಚ್‌ಸಿ ರವರ ಸಹಾಯದಿಂದ ಲ್ಯಾಪ ಟ್ಯಾಪಗೆ ಅಳವಡಿಸಿ ಡೌನಲೋಡ ಮಾಡಿಕೊಂಡು ಪರಿಶೀಲೀಸಲು, ಸದರಿ ಸ್ಕ್ರೀಪ್ಟ-2 ನ್ನೆದ್ದರ ಆಪಾದಿತ ಮಲ್ಲಿಕಾರ್ಜುನ ಬಾಬು ಇವರ ಮಾದರಿ ಧ್ವನಿ ಸಂಭಾಷಣೆ ಫೈಲ್ ನಂ:200930_0405-01 ನ್ನೆದ್ದರಲ್ಲಿ ಸೇವ್ ಆಗಿದ್ದು, ಈ ಸ್ಕ್ರೀಪ್ಟನ್ನು ಒಂದು ಹೊಸ ಸಿ.ಡಿ. ಯಲ್ಲಿ ವರ್ಗಾಯಿಸಿದ್ದು ನಂತರ ಸದರಿ ಸಿ.ಡಿಯನ್ನು, ಪಂಚ ಸಾಕ್ಷಿದಾರರ ಸಮಕ್ಷಮ ಕೇಳಿಸಲು, ಅದು ಪಂಚರು ಪ್ರಾರಂಬಿಸಿದ ವೈಸ ರಿಕಾರ್ಡದಲ್ಲಿ ದಾಖಲಾಗಿದ್ದ ಸಂಭಾಷಣೆ ಇದ್ದು ಆರೋಪಿಗಾಗಿ ತಯ್ಯಾರಿಸಿದ ಸ್ಕ್ರಿಪ್ಟ-2 ಆಗಿರುತ್ತದೆ ಎಂದಗೆ ಗೊತ್ತಿಲ್ಲ. ನಂತರ ತಾವು ಸದರಿ ಸಿ.ಡಿಯ ಮೇಲೆ ತಮ್ಮ ಮತ್ತು ಪಂಚರ ಸಹಿ ಮಾಡಿಸಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ನಂತರ ಸದರಿ ಸಿ.ಡಿಯನ್ನು ಒಂದು ಕಾಗದದ ಕವರಿನಲ್ಲಿ ಹಾಕಿ ಅಂಟಿಸಿ, "SN" ಇಂಗ್ಲೀಷ್ ಅಕ್ಷರದ ಅರಗಿನಿಂದ ಸೀಲ ಮಾಡಲಾಯಿತು, ಹಾಗೂ ಸದರಿ ಸಿ.ಡಿ.ಕವರಿಗೆ ಅ.ನಂ 2] ಮಾದರಿ ದನಿ ಸಂಗ್ರಹಣೆ ಆರ್ಟಿಕಲ್ ನಂ:2 ಎಂದು ಗುರುತಿಸಿ, ವಿವರ ಬರೆದ ಹಾಳೆಯ ಮೇಲೆ ಪಂಚ ಸಾಕ್ಷಿದಾರರ ಸಹಿ ಪಡೆದು ತನಿಖಾಧಿಕಾರಿ ಸಹಿ ಮಾಡಿ, ಸದರಿ ಚೀಟಿಯನ್ನು ಕವರಿಗೆ ಅಂಟಿಸಿ, ಮುಂದಿನ ತನಿಖೆ ಕುರಿತು ತಮ್ಮ ವಶಕ್ಕೆ ತೆಗೆದುಕೊಂಡಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ.

47. ಸದರಿ ಮಾದರಿ ಧ್ವನಿ ಸಂಗ್ರಹಣ ಪಂಚನಾಮೆಯನ್ನು ಆಪಾದಿತನ ಚೆಂಬರಿನಲ್ಲಿ ಕುಳಿತುಕೊಂಡು ದಿನಾಂಕ:30/09/2020 ರಂದು 15:30 ಗಂಟೆಯಿಂದ 16:30 ಗಂಟೆಯವರೆಗೆ ನಿರ್ವಹಿಸಿದ್ದು ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಅವದಿಯಲ್ಲಿ ಶ್ರೀ ಗುತ್ತಪಗೌಡ ಸಿ.ಪಿ.ಸಿ ರವರು ಪೋಟೋಗ್ರಾಫಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ವಿಜಯಕುಮಾರ ಸಿ.ಹೆಚ್.ಸಿ. ರವರು ಲ್ಯಾಪಟಾಪಿನಲ್ಲಿ ಬೆರಳಚ್ಚು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಕಾರಣ ಆಪಾದಿತ ಮಲ್ಲಿಕಾರ್ಜುನ ಬಾಬು ಇವರು ಫಿರ್ಯಾದಿ ವಿರುಪಾಕ್ಷ ಇತನು. ಶ್ರೀ ಶಿವರೆಡ್ಡಿ ತಂದೆ ಮಹಾದೇವಪ್ಪ ಇವರ ಕವಲೂರು ಹೊಲ ಸರ್ವೆ ನಂ: 542/3 ನ್ನೆದ್ದರ 4 ಎಕರೆ ಜಮೀನಿನಲ್ಲಿ, ಶತಾವರ ಬೆಳೆಗಳಿಗಾಗಿ, ಹನಿ ನೀರಾವರಿ ಘಟಕ ಆಳವಡಿಸಿದ್ದು. ಇದಕ್ಕೆ ಸರಕಾರದಿಂದ ಮಂಜೂರಿಯಾಗುವ ಸಬ್ಸಿಡಿ ಹಣ ಮಂಜೂರಿ ಮಾಡಲು ಮಲ್ಲಿಕಾರ್ಜುನ ಬಾಬು ಇವರು, 5,000/- ರೂ ಲಂಚದ ಹಣದ ಬೇಡಿಕೆ ಇಟ್ಟು ದಿನಾಂಕ:30/09/2020 ರಂದು ಉಪ ನಿರ್ದೇಶಕರು ತೋಟಗಾರಿಕೆ ಇಲಾಖೆ ಯಾಧಗಿರಿ ಯಲ್ಲಿ 12:15 ಗಂಟೆಯ ಸುಮಾರಿಗೆ ವಿಧಾನಸೌದ ಬ್ಲಾಕ್ ನಂ-ಸಿ-17. ನ್ನೆದ್ದರ ತನ್ನ ಚೆಂಬರಿನಲ್ಲಿ ಫಿರ್ಯಾದಿಯಿಂದ 5,000/- ರೂ ತೆಗೆದುಕೊಂಡಾಗ ಲಂಚದ ಹಣದ ಸಮೇತ ಸಿಕ್ಕಿ ಬಿದ್ದಿರುತ್ತಾನೆಂದು ಹೇಳಿ ಟೈಪ ಮಾಡಿಸಿದ ಹೇಳಿಕೆ ಎಂದರೆ ಸರಿಯಲ್ಲ.

48. ನಿಪಿ 45 ರಂತೆ ನನ್ನ ಸಮಕ್ಷಮ ಪೊಲಿಸರು ನಕಾಶೆಯನ್ನು ತಯಾರಿಸಿ ನನ್ನ ಸಹಿ ಪಡೆದಿದ್ದು ನಿಪಿ 46 ರಂತೆ ನಾನು ಲಂಚದ ಬದಲಿ ಹಣ ಪಾವತಿಸುವ ಬಗ್ಗೆ ಅರ್ಜಿ ಬರೆದಿದ್ದು ಅದರಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಹಣ ಜಪ್ತಿ ಪಂಚನಾಮೆ ಕಾಲಕ್ಕೆ ನಿಪಿ 26 ರಿಂದ 34 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ಮಾದರಿ ದ್ವನಿ ಸಂಗ್ರಹ ಪಂಚನಾಮೆ ಕಾಲಕ್ಕೆ ನಿಪಿ 36 ರಿಂದ 43 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತಾರೆಂದರೆ ಸರಿಯಲ್ಲ. ಈ ಬಗ್ಗೆ ಈಗ ವಿವರವಾಗಿ ಓದಿ ಹೇಳಿದಂತೆ ಪೊಲಿಸರಿ ಮುಂದೆ ಹೇಳಿಕೆ ದಿಃ 30-09-2020 ರಂದು ಹೇಳಿಕೆ ನೀಡಿರುತ್ತೆನೆಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ 47 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯ ಗೊತ್ತಿದ್ದು ನಾನು ಆರೊಪಿತರೊಂದಗೆ ರಾಜಿ ಮಾಡಿಕೊಂಡು ಆತನಿಗೆ ಸಹಾಯ ಮಾಡುಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ ವಿ ವಕೀಲರಿಂದ**

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಖರ್ಚು ಸಹಿತ ಅನೂಮತಿಸಿ ಮುಂದೂಡಲಾಯಿತು.)

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.